# ದಿನಾಂಕ: 12-11-2010ರಂದು ಅಪರಾಹ್ನ:12-05 ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯತ್, ಹಾಸನ ಇಲ್ಲಿ ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳು

**ಅಧ್ಯಕ್ಷತೆ: ಶ್ರೀಮತಿ ಮಹದೇವಮ್ಮ**

**ಅಧ್ಯಕ್ಷರು,**

**ಜಿಲ್ಲಾ ಪಂಚಾಯತ್, ಹಾಸನ.**

ಹಾಜರಿ: 43 ಗೈರು ಹಾಜರಿ: 15

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಸಭೆಗೆ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಜಿಲ್ಲಾ ಮಟ್ಟದ ಅಧಿಕಾರಿಗಳು, ಪತ್ರಿಕಾ ಮಾಧ್ಯಮದವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. | |
| | | ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಮಳೆಯಿಂದ ಬೆಳೆ ನಾಶವಾಗಿವೆ, ನಾಲೆಗಳು ಕುಸಿದುಹೋಗಿವೆ, ಮನೆಗಳು ಬಿದ್ದು ಹೋಗಿವೆ, ರಸ್ತೆ ಸಂಪರ್ಕ ಕಡಿದು ಹೋಗಿರುತ್ತವೆ. ಜಿಲ್ಲಾ ಉಸ್ತುವಾರಿ ಸಚಿವರು ಪ್ರಕೃತಿ ವಿಕೋಪದಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಪ್ರತಿ ತಾಲ್ಲೂಕಿಗೆ ರೂ.5.00ಕೋಟಿಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದು, ಇಲ್ಲಿಯವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ, ದಿನಾಂಕ: 18-11-2010ರಂದು ಪ್ರಕೃತಿ ವಿಕೋಪ ಮತ್ತು ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯಿತಿ ವಿಶೇಷ ಸಭೆಯನ್ನು ಕರೆದು, ಸಭೆಗೆ ಜಿಲ್ಲಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳು/ ತಹಸೀಲ್ದಾರ್ ಗಳು/ ಕಾರ್ಯನಿರ್ವಾಹಕ ಅಧಿಕಾರಿಗಳು/ ಅಧೀಕ್ಷಕ ಅಭಿಯಂತರರು, ಚೆಸ್ಕಾಂ/ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ | ಸಭೆಯಲ್ಲಿ ಚರ್ಚಿಸಿದಂತೆ, ಪ್ರಕೃತಿ ವಿಕೋಪ ಮತ್ತು ಕುಡಿಯುವ ನೀರಿನ ಸರಬರಾಜು ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ದಿನಾಂಕ:18-11-2010ರಂದು ತುರ್ತು ಸಭೆಯನ್ನು ನಡೆಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

ವಿಭಾಗ/ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗಗಳು ಇವರಿಂದ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಡಿಯಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ಪೂರ್ಣ ವಿವರಗಳೊಂದಿಗೆ ಸಭೆಗೆ ಆಹ್ವಾನಿಸಿ ವಿಷಯಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಮುಂದುವರೆದು, ಹಾಸನ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುತ್ತಿದ್ದು, ಕೆರೆಕಟ್ಟೆ ಮತ್ತು ನಾಲೆಗಳ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಮೀನಿನಲ್ಲಿ ಬೆಳೆಯಲಾಗಿದ್ದ ಬೆಳೆಗಳು ಹೆಚ್ಚಿನ ಮಳೆಯಾಗಿದ್ದರಿಂದ ಸಂಪೂರ್ಣ ನಾಶಹೊಂದಿದ್ದು, ಬೆಳೆನಷ್ಟಕ್ಕನುಗುಣವಾಗಿ ರೈತರಿಗೆ ಪರಿಹಾರವನ್ನು ನೀಡುವಂತೆ ಸಭೆಯಲ್ಲಿ ನಿರ್ಣಯವನ್ನು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಕೆರೆ ಅಭಿವೃದ್ಧಿ ಯೋಜನೆಯಡಿ ಪ್ರತಿ ಸದಸ್ಯರಿಗೆ ರೂ.10.00ಲಕ್ಷಗಳಂತೆ ಅನುದಾನವನ್ನು ನೀಡಿದಲ್ಲಿ ಸಣ್ಣಪುಟ್ಟ ಕೆರೆ ದುರಸ್ಥಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಿವರಾಂ ಪಟೇಲ್ ರವರು ಮಾತನಾಡುತ್ತಾ, ಪ್ರಕೃತಿ ವಿಕೋಪ ವಿಷಯವು ಜಿಲ್ಲಾಧಿಕಾರಿಯವರಿಗೆ ಸಂಬಂಧಿಸಿರುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ ಪ್ರಕೃತಿ ವಿಕೋಪದ ಬಗ್ಗೆ ಚರ್ಚೆ ಮಾಡಿ ನಿರ್ಣಯವನ್ನು ಮಾಡಿದರೂ ಸಹ ಸರ್ಕಾರಕ್ಕೆ ಜಿಲ್ಲಾಧಿಕಾರಿಯವರ ಮೂಲಕವೇ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ. ಅಲ್ಲದೆ, ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಬಹಳಷ್ಟು ನಷ್ಟವುಂಟಾಗಿರುತ್ತದೆ. ಆದ್ದರಿಂದ ಜಿಲ್ಲಾಧಿಕಾರಿಯವರನ್ನು ಪ್ರಕೃತಿ ವಿಕೋಪದಡಿ ಆಗಿರುವ ನಷ್ಟದ ಬಗ್ಗೆ ಸಮಗ್ರ ವಿವರಗಳೊಂದಿಗೆ ಸಭೆಗೆ ಆಹ್ವಾನಿಸಬೇಕೆಂದು ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಅಧಿಕಾರಿಯವರಿಗೆ/ ಮಾನ್ಯ ಜಿಲ್ಲಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳು ಮತ್ತು ಸಂಬಂಧಪಟ್ಟ ಇತರೆ ಎಲ್ಲಾ ಅಧಿಕಾರಿಗಳು ಸಭೆಗೆ ಸಮಗ್ರ ಮಾಹಿತಿಯೊಂದಿಗೆ ಮುಂದಿನ ತುರ್ತು ಸಭೆಗೆ ಹಾಜರಾಗುವಂತೆ ತಿಳಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು.

| | | | |
|---|---|---|---|
| 1 | ದಿನಾಂಕ: 06-09-2010ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಅಂಗೀಕರಿಸುವ ಬಗ್ಗೆ. | ದಿನಾಂಕ: 06-09-2010ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಹದೇವಮ್ಮ ರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಸಭೆಯ ನಡವಳಿಗಳನ್ನು ಅನುಮೋದಿಸಿದರು.<br>ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದಿಂದ ಹಾಸನ ಜಿಲ್ಲೆಗೆ ಅನ್ಯಾಯವಾಗಿರುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ ರೂ.9.98 ಲಕ್ಷಗಳಿಗೆ ಕುಡಿಯುವ ನೀರಿನ ಯೋಜನೆಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದರೂ ಸಹ ಇಲ್ಲಿಯವರೆಗೆ ಅನುಮೋದನೆಯನ್ನು ನೀಡಿರುವುದಿಲ್ಲ. ಈ ಕುರಿತು ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಉಗ್ರವಾದ ಹೋರಾಟವನ್ನು ಮಾಡಲಾಗುವುದೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಿದರು.<br>ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಈಗಾಗಲೇ ಅನುಷ್ಠಾನ ಮಾಡಿರುವ ಕುಡಿಯುವ ನೀರಿನ ಯೋಜನೆಗೆ ಸಿಂಗಲ್ ಫೇಸ್ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಠೇವಣಿ ಹಣವನ್ನು ಚೆಸ್ಕಾಂಗೆ ಪಾವತಿಸಿದ್ದರೂ ಸಹ ಚೆಸ್ಕಾಂ ವತಿಯಿಂದ ರೂ.60000/-ಗಳನ್ನು ಪಾವತಿಸಬೇಕೆಂದು ತಿಳಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್ ರವರು ಮಾತನಾಡುತ್ತಾ, ಅರಕಲಗೂಡು ತಾ: ಕೇರಳಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಿರುವ ಎಕ್ಸರೇ ಯಂತ್ರಕ್ಕೆ ಅವಶ್ಯವಿರುವ 35 ಕೆ.ವಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಹಾಗೂ ಎಕ್ಸರೇ ಯಂತ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಿ ಒಂದೂವರೆ ವರ್ಷವಾಗುತ್ತಲಿದೆ. ಆದ್ದರಿಂದ, ತ್ವರಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಬೇಕೆಂದು ಕೋರಿದರು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, 2010-11ನೇ ಸಾಲಿನಲ್ಲಿ ಎಕ್ಸರೇ ಯಂತ್ರ ಖರೀದಿಗೆ ನಿಗದಿಪಡಿಸಿರುವ ಅನುದಾನದಲ್ಲಿ ಉಳಿಕೆಯಾಗುವ ಹಣದಲ್ಲಿ ಕೇರಳಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಎಕ್ಸರೇ ಯಂತ್ರಕ್ಕೆ ಅವಶ್ಯವಿರುವ 35 | ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.<br>ಸಮಗ್ರ ಚರ್ಚೆಯ ನಂತರ ದಿನಾಂಕ: 06-09-2010ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. |

ಕೆ.ವಿ ವಿದ್ಯುತ್ ಸಂಪರ್ಕಕ್ಕೆ ಅವಶ್ಯವಿರುವ ಠೇವಣಿ ಹಣವನ್ನು ಪಾವತಿಸಲು ಕ್ರಮ ವಹಿಸಲಾಗಿದೆ ಮತ್ತು ಒಂದು ವಾರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಪ್ರಾಥಮಿಕ ಆರೋಗ್ಯ ಘಟಕ/ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ರಚನೆಯಾಗಿರುವ ಆರೋಗ್ಯ ರಕ್ಷಾ ಸಮಿತಿಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ವಿನಿಯೋಗಿಸದೇ ಹಾಗೆಯೇ ಇಟ್ಟಿದ್ದಾರೆ. ಸದರಿ ಅನುದಾನವನ್ನು ವಿನಿಯೋಗಿಸಿದಲ್ಲಿ ಮುಂದಿನ ಸಾಲಿನ ಅನುದಾನ ಬಿಡುಗಡೆಯಾಗುತ್ತದೆ. ಆದರೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಯಾವುದೇ ಕ್ರಮ ವಹಿಸಿರುವುದಿಲ್ಲ. ಆದ್ದರಿಂದ, ಸದರಿ ಅನುದಾನದಲ್ಲಿ ಪ್ರಾಥಮಿಕ ಆರೋಗ್ಯ ಘಟಕ/ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, ಪ್ರಾಥಮಿಕ ಆರೋಗ್ಯ ಘಟಕ/ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಆರೋಗ್ಯ ರಕ್ಷಾ ಸಮಿತಿಯಲ್ಲಿರುವ ಅನುದಾನವನ್ನು ವಿನಿಯೋಗಿಸಲು ಕ್ರಮ ವಹಿಸಬೇಕೆಂದು ಸಂಬಂಧಪಟ್ಟವರೆಲ್ಲರಿಗೂ ನಿರ್ದೇಶನ ನೀಡಲಾಗಿದೆ ಎಂದು ಸಭೆಗೆ ವಿವರ ನೀಡಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಪ್ರಾಥಮಿಕ ಆರೋಗ್ಯ ಘಟಕ/ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳಲ್ಲಿ ಆರೋಗ್ಯ ರಕ್ಷಾ ಸಮಿತಿಯನ್ನು ರಚನೆ ಮಾಡಿ ಆಸ್ಪತ್ರೆಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ವಹಿಸುವ ಬಗ್ಗೆ ಜಿಲ್ಲಾ ಆರೋಗ್ಯ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡು ನಿರ್ದೇಶನ ನೀಡಲಾಗುವುದು ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಉದಯಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿದ್ದ 108

| | | | |
|---|---|---|---|
| | | ವಾಹನವನ್ನು ಬದಲಾವಣೆ ಮಾಡಿರುವುದು ಕಂಡುಬಂದಿರುತ್ತದೆ. ಆದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಪಘಾತಗಳು ಸಂಭವಿಸುವುದರಿಂದ, ಕಡ್ಡಾಯವಾಗಿ 108 ವಾಹನ ಸೇವೆಯನ್ನು ಕಲ್ಪಿಸಲು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಉದಯಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 108 ವಾಹನ ಸೇವೆಯನ್ನು ಕಲ್ಪಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.<br>ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್ ರವರು ಮಾತನಾಡುತ್ತಾ, 108 ಆಂಬುಲೆನ್ಸ್ ನಲ್ಲಿ ರಹದಾರಿ ಕೇವಲ 32 ಕಿ.ಮೀಗಳಿಗೆ ಮಿತಿಗೊಳಿಸಿದ್ದು, ವಿಷ ಕುಡಿದವರನ್ನು ಮತ್ತು ಗರ್ಭಿಣಿಯನ್ನು ಅರ್ಧ ದಾರಿಯಲ್ಲೇ ಬಿಟ್ಟು ಬಂದಿರುತ್ತಾರೆ. ಆದ್ದರಿಂದ, ಅಗತ್ಯವಿದ್ದಲ್ಲಿ ಜಿಲ್ಲಾ ಆಸ್ಪತ್ರೆಯವರೆಗೂ ಸಹ ಕರೆದುಕೊಂಡು ಬರಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, 108 ಯೋಜನೆಯ ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು, ಕಿ.ಮೀ ಮತ್ತು ದರದ ಬಗ್ಗೆ ಸರ್ಕಾರದ ಮಟ್ಟದಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಆದರೂ ಸಹ ಜಿಲ್ಲಾ ಪಂಚಾಯಿತಿಯಿಂದ ಅಗತ್ಯವಿದ್ದಲ್ಲಿ ಹೆಚ್ಚು ಕಿ.ಮೀಗಳನ್ನು ನಿಗದಿಪಡಿಸುವಂತೆ ಕೋರಿ ನಿರ್ಣಯವನ್ನು ಮಾಡಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಜಿಲ್ಲೆಯಲ್ಲಿ 108 ವಾಹನಗಳನ್ನು ನಿರ್ವಹಣೆ ಮಾಡುತ್ತಿರುವ ಜಿ.ವಿ.ಕೆ ಇ.ಎಂ.ಆರ್.ಐ. ಸಂಸ್ಥೆಯವರು ಮುಂದಿನ ಸಾಮಾನ್ಯ ಸಭೆಗೆ ಪ್ರತಿ ಕಿ.ಮೀಗೆ ಎಷ್ಟು ವೆಚ್ಚವಾಗುತ್ತಿದೆ, ತುರ್ತು ಕೆಲಸ ಇಲ್ಲದಿರುವ ಸಮಯದಲ್ಲಿ ಇನ್ನ್ಯಾವ ಕೆಲಸಗಳನ್ನು ನಿರ್ವಹಿಸಲಾಗುತ್ತದೆ, ಎಂಬ ಬಗ್ಗೆ ಪೂರ್ಣ ವಿವರಗಳೊಂದಿಗೆ ಸಭೆಗೆ ಹಾಜರಾಗಬೇಕೆಂದು ತಿಳಿಸಿದರು. | |
| 2 | ದಿನಾಂಕ: 27-10-2010 ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ | ದಿನಾಂಕ:27-10-2010 ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಹದೇವಮ್ಮರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್.ಅಣ್ಣಪ್ಪಶೆಟ್ಟಿರವರು ಅನುಮೋದಿಸಿದರು. | ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.<br>ಸಭೆಯಲ್ಲಿ ವಿವರವಾಗಿ ಚರ್ಚಿಸಿದ ನಂತರ ದಿನಾಂಕ: 28- |

| | | | |
|---|---|---|---|
| | | ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಸೀರೆ ವಿತರಣೆ ಕಾರ್ಯಕ್ರಮದಡಿ, ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಹಣ ವ್ಯಯ ಮಾಡಲಾಗಿದೆ? ಎಂಬ ಬಗ್ಗೆ ಪೂರ್ಣ ವಿವರಗಳನ್ನು ನೀಡಬೇಕೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರಿಗೆ ತಿಳಿಸಿದರು.<br>ಉಪ ನಿರ್ದೇಶಕರು ಉತ್ತರಿಸುತ್ತಾ, ಹಾಸನ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಸೀರೆ ವಿತರಣೆ ಕಾರ್ಯಕ್ರಮಕ್ಕೆ ಸರ್ಕಾರದಿಂದ, ಒಟ್ಟು ರೂ.30.00ಲಕ್ಷಗಳನ್ನು ನಿಗದಿಪಡಿಸಿದ್ದು, ರೂ.15.00ಲಕ್ಷಗಳನ್ನು ಬಿಡುಗಡೆಯಾಗಿರುತ್ತದೆ. ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಸೀರೆ ವಿತರಣೆ ಕಾರ್ಯಕ್ರಮ ಸಮಿತಿಗೆ ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಿ ಅವರು ನೀಡಿರುವ ನಿರ್ದೇಶನಗಳನ್ವಯ ಕ್ರಮ ವಹಿಸಲಾಗಿದೆ. ಬಿಡುಗಡೆಯಾಗಿರುವ ಅನುದಾನದಲ್ಲಿ ರೂ.1.50ಲಕ್ಷಗಳನ್ನು ಕೆ.ಎಂ.ಎಫ್. ಗೆ ನೀಡಲಾಗಿದೆ, ರೂ.5.00ಲಕ್ಷಗಳನ್ನು ಶಾಮ್ಮಿಯಾನದವರಿಗೆ ನೀಡಲಾಗಿದೆ, ಊಟ ತಿಂಡಿಗೆ ಮುಂಗಡವಾಗಿ ರೂ.2.00ಲಕ್ಷಗಳನ್ನು ನೀಡಲಾಗಿದ್ದು, ಉಳಿಕೆ ಹಣವನ್ನು ಬ್ಯಾನರ್, ಸ್ಟೇಜ್ ಡೆಕೋರೇಶನ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನೀಡಬೇಕಾಗಿರುತ್ತದೆ. ಜಿಲ್ಲೆಗೆ ಒಟ್ಟು 30,000 ಸೀರೆಗಳು ಸರಬರಾಜಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಟೆಂಡರ್ ಕರೆಯಲು ವಿನಾಯಿತಿಯನ್ನು ಸರ್ಕಾರದಿಂದ ನೀಡಲಾಗಿರುತ್ತದೆ. ಅದರಂತೆ ಕ್ರಮ ವಹಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳಿಗೆ ಸೀರೆ ವಿತರಣೆಯಲ್ಲಿ ಹಣದ ದುರುಪಯೋಗವಾಗಿರುವುದು ಕಂಡುಬರುತ್ತಿದೆ. ಶಾಮಿಯಾನ/ ಬಂಟಿಗ್ಸ್ ಬ್ಯಾನರ್ಸ್ ಗಳನ್ನು ಸಿದ್ದಪಡಿಸಲು ನೇರವಾಗಿ ಹಣ ನೀಡಲಾಗಿದ್ದು, ಕಾನೂನೂ ರೀತ್ಯಾ ಕ್ರಮ ವಹಿಸಿರುವುದಿಲ್ಲ. ಈ ಬಗ್ಗೆ ವಿವರ ನೀಡಬೇಕೆಂದು ತಿಳಿಸಿದರು. | 08-10 ರಂದು ನಡೆದ ಹಣಕಾಸು, ಲೆಕ್ಕಪರಿಶೋಧನ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿ ಸಿತು. |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಸೀರೆ ವಿತರಣೆ ಕಾರ್ಯಕ್ರಮಕ್ಕೆ ಸರ್ಕಾರದಿಂದ ವಿಶೇಷ ಅನುದಾನ ರೂ.30.00ಲಕ್ಷಗಳು ನಿಗದಿಯಾಗಿದ್ದು, ರೂ.15.00ಲಕ್ಷಗಳು ಬಿಡುಗಡೆಯಾಗಿದ್ದು, ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಕಾರ್ಯಕ್ರಮದ ಎಲ್ಲಾ ಕೆಲಸಗಳಿಗೆ ಅಂದಾಜುಪಟ್ಟಿ ಸಿದ್ದಪಡಿಸಿ ಅದರಂತೆ ಕ್ರಮ ವಹಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣರವರು ಮಾತನಾಡುತ್ತಾ, ಈಗ ವಿತರಣೆಯಾಗಿ ಬಾಕಿ ಉಳಿದಿರುವ ಸೀರೆಗಳನ್ನು ಶಿಷ್ಟಾಚಾರವನ್ನು ಪಾಲಿಸಿ ಸಂಬಂಧಪಟ್ಟ ಶಾಸಕರು/ ಜಿಲ್ಲಾ ಪಂಚಾಯಿತಿ ಸದಸ್ಯರು/ ಮತ್ತು ಇತರೆ ಜನಪ್ರತಿನಿಧಿಗಳ ಸಮ್ಮುಖದಲ್ಲಿ ವಿತರಣೆ ಮಾಡಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಕೆ.ಕುಮಾರಸ್ವಾಮಿರವರು ಮಾತನಾಡುತ್ತಾ, ಪ್ರಕೃತಿ ವಿಕೋಪದಡಿ ಜಿಲ್ಲೆಗೆ ಕೇವಲ ರೂ.25.00ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಪಾಲಾಗಿದೆ. ಆದರೆ, ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಅಪಾರ ಹಾನಿಯಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಅನುದಾನದ ಅವಶ್ಯಕತೆಯಿರುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಕಾಮಗಾರಿಗಳನ್ನು ಉತ್ತಮವಾಗಿ ನಿರ್ಮಿಸಿದ್ದರೂ ಸಹ ಗುತ್ತಿಗೆದಾರರಿಗೆ ಎಫ್.ಎಸ್.ಡಿ ಹಣವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ನೀಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರು ಕೋರಿರುವಂತೆ ಗುತ್ತಿಗೆದಾರರಿಗೆ ಎಫ್.ಎಸ್.ಡಿ ಹಣವನ್ನು ನೀಡಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಿದರು.

| | | | |
|---|---|---|---|
| | ದಿನಾಂಕ: 21-10-2010 ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನು ಮೋದಿಸುವ ವಿಚಾರ | ದಿನಾಂಕ: 21-10-2010ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಸಮಿತಿ ಅಧ್ಯಕ್ಷರಾದ ಶ್ರೀ ಎಸ್.ದ್ಯಾವೇಗೌಡರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಲೋಕನಾಥ್ ರವರು ಸಭೆ ನಡವಳಿಗಳನ್ನು ಅನುಮೋದಿಸಿದರು. | ಸಮಗ್ರ ಚರ್ಚೆಯ ನಂತರ ದಿ: 21-10-2010 ರಂದು ನಡೆದ ಸಾಮಾನ್ಯ ಸ್ಥಾಯಿ ಸಮತಿ ಸಭೆಯ ನಡವಳಿ ಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು. |
| 4 | ದಿನಾಂಕ: 25-10-2010ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿ ಗಳನ್ನು ಅನುಮೋದಿಸುವ ಬಗ್ಗೆ. | ದಿ: 25-10-2010ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಮಿತಿಯ ಮಾನ್ಯ ಅಧ್ಯಕ್ಷರಾದ ಶ್ರೀ ಹೆಚ್.ಡಿ.ರಾಮೇಗೌಡರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಯು.ಕೆ.ಶಿವನಂಜಪ್ಪರವರು ಸಭೆಯ ನಡವಳಿ ಗಳನ್ನು ಅನುಮೋದಿಸಿದರು. | ಸಮಗ್ರ ಚರ್ಚೆಯ ನಂತರ ದಿನಾಂಕ: 25-10-2010ರಂದು ನಡೆದ ಶಿಕ್ಷಣ ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 5 | ದಿನಾಂಕ: 26-10-2010ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿ ಗಳನ್ನು ಅನುಮೋದಿ ಸುವ ಬಗ್ಗೆ. | ದಿನಾಂಕ: 26-10-2010ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಸಮಿತಿ ಅಧ್ಯಕ್ಷರಾದ ಶ್ರೀಮತಿ ನಂಜಮ್ಮ ಉ: ಕಮಲಮ್ಮ ರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಕುಮಾರಸ್ವಾಮಿರವರು ನಡವಳಿಗಳನ್ನು ಅನುಮೋದಿಸಿದರು. | ಸಮಗ್ರ ಚರ್ಚೆಯ ನಂತರ ದಿ: 26-10-2010ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿ ಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು. |
| 6 | ದಿನಾಂಕ: 25-10-2010 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ. | ದಿನಾಂಕ: 25-10-2010ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್.ವೈ.ಚಂದ್ರಶೇಖರ್ ರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಪರ್ವತಯ್ಯರವರು ಅನುಮೋದಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ 6-7 ತಿಂಗಳುಗಳಿಂದ ವೇತನ ಪಾವತಿಸಿರುವುದಿಲ್ಲ. ವೇತನವನ್ನು ಸಮರ್ಪಕವಾಗಿ ನೀಡದಿದ್ದಲ್ಲಿ ಶಿಕ್ಷಕರುಗಳು ಆಸಕ್ತಿಯಿಂದ ಕೆಲಸ ನಿರ್ವಹಿಸುವುದಿಲ್ಲ. ಇದರಿಂದಾಗಿ ಮಕ್ಕಳ ವ್ಯಾಸಂಗದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಆದಕಾರಣ, ಮಾನ್ಯ ಜಿಲ್ಲಾಧಿಕಾರಿಯವರೊಂದಿಗೆ ಸಮಾಲೋಚಿಸಿ ಶಿಕ್ಷಕರುಗಳಿಗೆ ವೇತನ ಪಾವತಿ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು. | ಸಮಗ್ರ ಚರ್ಚೆಯ ನಂತರ ದಿನಾಂಕ: 25-10-2010ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

| | | | |
|---|---|---|---|
| | | ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ.ರಾಮೇಗೌಡರವರು ಮಾತನಾಡುತ್ತಾ, ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಗ್ರೂಪ್-ಡಿ ನೌಕರರಿಗೆ 3-4 ತಿಂಗಳುಗಳಿಂದ ಸಂಬಳ ನೀಡದಿರುವುದರಿಂದ, ಅವರ ಜೀವನ ನಿರ್ವಹಣೆಗೆ ತೊಂದರೆಯಾಗಿರುತ್ತದೆ. ಆದ್ದರಿಂದ, ವೇತನ ನೀಡಲು ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಪರ್ವತಯ್ಯರವರು ಮಾತನಾಡುತ್ತಾ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶಿಕ್ಷಕರ ಕೊರತೆಯಿದ್ದು, ಶಿಕ್ಷಕರುಗಳನ್ನು ಇಲ್ಲಿಯವರೆಗೆ ನೇಮಕ ಮಾಡಿರುವುದಿಲ್ಲ. ಈ ಬಗ್ಗೆ ಹಲವಾರು ಬಾರಿ ಸಭೆಗಳಲ್ಲಿ ಪ್ರಸ್ತಾಪಿಸಿದ್ದರೂ ಸಹ ಯಾವುದೇ ಕ್ರಮ ವಹಿಸಿರುವುದಿಲ್ಲ. ಶಿಕ್ಷಕರುಗಳಿಲ್ಲದೆ ಮಕ್ಕಳಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಅಲ್ಪಸಂಖ್ಯಾತರ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು ಈಗ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ವೇತನ ಪಾವತಿಸುವಂತೆ ನಿರ್ದೇಶನ ನೀಡಿರುತ್ತಾರೆಂದು ಸಭೆಗೆ ವಿವರ ನೀಡಿದರು. | |
| | | ಮಾನ್ಯ ಸಧಸ್ಯರಾದ ಶ್ರೀ ಹೆಚ್.ಎಸ್.ಶಂಕರ್ ರವರು ಮಾತನಾಡುತ್ತಾ, ಸುವರ್ಣ ಗ್ರಾಮೋದಯ ಯೋಜನೆಯಡಿ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ತರಬೇತಿಯನ್ನು ನೀಡಬಾರದೆಂದು ತಿಳಿಸಿದ್ದರೂ ಸಹ ಜಿಲ್ಲಾ ಪಂಚಾಯಿತಿ ವತಿಯಿಂದ ಕಿಯೋನಿಕ್ಸ್ ರವರ ಮೂಲಕವೇ ತರಬೇತಿಯನ್ನು ನೀಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸ್ಥಳೀಯವಾಗಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಸಂಸ್ಥೆಯ ಮೂಲಕ ಸುವರ್ಣ ಗ್ರಾಮಗಳಲ್ಲಿನ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಕಾಮಾಕ್ಷಿರಾಜುರವರು ಮಾತನಾಡುತ್ತಾ, ಬೇಲೂರು ಪಟ್ಟಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ನಿರ್ಮಾಣ ಅರ್ಧಕ್ಕೇ ನಿಂತಿದ್ದು, ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು ಈಗ ವಾಸವಾಗಿರುವ ಕಟ್ಟಡವು ಚಿಕ್ಕದಾಗಿದ್ದು, 6ನೇ ತರಗತಿಯಿಂದ 10ನೇ ತರಗತಿಯವರೆಗೆ ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟಿಗೆ ಇರಬೇಕಾಗಿರುವುದರಿಂದ, ತುಂಬಾ ತೊಂದರೆಯಾಗಿದ್ದು, ಮಕ್ಕಳು ಧರಣಿ ಮಾಡುವುದಾಗಿ ತಿಳಿಸಿದ್ದಾರೆ ಮತ್ತು ಹಗರೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿಯೂ ಸಹ | ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಯಿತು. |

<table>
<tr><td></td><td>ತುಂಬಾ ತೊಂದರೆಯಿರುತ್ತದೆ. ಆದ್ದರಿಂದ, ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ವಹಿಸಿ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಅರಕಲಗೂಡು ತಾಲ್ಲೂಕನ್ನು ಹೊರತುಪಡಿಸಿ ಬೇರೆ ತಾಲ್ಲೂಕುಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲಾಗಿದ್ದು, ಅನುದಾನವನ್ನು ಬಿಡುಗಡೆ ಮಾಡದೇ ಇರುವುದರಿಂದ, ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ ಅವಶ್ಯ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿದರು.</td><td></td></tr>
<tr><td colspan="2">ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</td><td></td></tr>
<tr><td>ಹಾಸನ ಜಿಲ್ಲೆಯ ತಾಲ್ಲೂಕುಗಳಿಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರದ್ದು ಮಾಡಿರುವುದನ್ನು ಹಿಂಪಡೆಯುವ ಬಗ್ಗೆ.</td><td>ಮಾನ್ಯ ಶಾಸಕರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ಸರ್ಕಾರದ ಆದೇಶ ಸಂಖ್ಯೆ: ಆಕುಕ 443 ಸಿಜಿಎಂ 2007 ಬೆಂಗಳೂರು ದಿ: 4-10-2007ರಲ್ಲಿ ಹಾಸನ ಜಿಲ್ಲೆಗೆ ಒಟ್ಟು 26 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದ್ದು, 26 ಕೇಂದ್ರಗಳಲ್ಲಿ 13 ಕೇಂದ್ರಗಳು ಈಗ್ಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ಉಳಿಕೆ ಗ್ರಾಮಗಳಲ್ಲಿ ಸರ್ಕಾರದ ಆದೇಶದಂತೆ ಈ ಕೆಳಕಂಡ ಕ್ರಮ ವಹಿಸಲಾಗಿದೆ.<br>ವಿವರ:-
<table>
<tr><th>ತಾಲ್ಲೂಕಿನ ಹೆಸರು</th><th colspan="2">ಗ್ರಾಮದ ಹೆಸರು</th><th>ತೆಗೆದುಕೊಂಡ ಕ್ರಮ</th></tr>
<tr><td>ಹೊಳೆನರಸೀಪುರ</td><td>1</td><td>ಎಲೆಚಾಗಹಳ್ಳಿ</td><td>ವಂತಿಕೆ, ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>2</td><td>ನಗರನಹಳ್ಳಿ</td><td>ವಂತಿಕೆ, ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>3</td><td>ಬನಕುಪ್ಪೆ<br>ಬಿಟ್ಟಗೋಂಡನಹಳ್ಳಿ</td><td>ವಂತಿಕೆ, ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>4</td><td>ಆನೆಕನ್ನಂಬಾಡಿ</td><td></td></tr>
<tr><td>ಸಕಲೇಶಪುರ</td><td>5</td><td>ವಲಳಹಳ್ಳಿ</td><td>ವಂತಿಕೆ, ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>6</td><td>ಯಡಿಕೇರಿ</td><td>ವಂತಿಕೆ, ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>7</td><td>ವಣಗೂರು</td><td></td></tr>
</table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸರ್ಕಾರದ ಆದೇಶದಲ್ಲಿ ಹಾಸನ ಜಿಲ್ಲೆಗೆ 2007-08ನೇ ಸಾಲಿನಲ್ಲಿ ಮಂಜೂರಾಗಿದ್ದ 26 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರದ್ದುಪಡಿಸಿರುವುದರಿಂದ, ಆ ಭಾಗದ ಗ್ರಾಮೀಣ ಪ್ರದೇಶದ ಜನರಿಗೆ ಚಿಕಿತ್ಸೆಗೆ ತುಂಬಾ ಅನಾನುಕೂಲವಾಗುತ್ತದೆ. ಅಲ್ಲದೆ, ಸದರಿ ಗ್ರಾಮಗಳ ಪೈಕಿ 7 ಗ್ರಾಮಗಳಲ್ಲಿ ಸರ್ಕಾರವು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿದ್ದು, ಉಳಿದ 5 ಗ್ರಾಮಗಳಲ್ಲಿ ಷರತ್ತುಗಳನ್ನು ಪೂರೈಸಲು ಒಪ್ಪಿಗೆ ನೀಡಿರುವುದರಿಂದ, ರದ್ದುಪಡಿಸಿರುವ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತೆ ಮಂಜೂರು ಮಾಡಬೇಕೆಂದು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಿತು.</td></tr>
</table>

<table>
<tr><td></td><td></td><td>
<table>
<tr><td>ಬೇಲೂರು</td><td>8</td><td>ಅನುಘಟ್ಟ</td><td>ತಾತ್ಕಾಲಿಕ ಕಟ್ಟಡ ನೀಡಿದ್ದಾರೆ.</td></tr>
<tr><td></td><td>9</td><td>ಗೊಬ್ಬಲಗೋಡು</td><td></td></tr>
<tr><td>ಅರಕಲಗೂಡು</td><td>10</td><td>ರಾಂಪುರ</td><td></td></tr>
<tr><td>ಚನ್ನರಾಯಪಟ್ಟಣ</td><td>11</td><td>ಕುಂಬೇನಹಳ್ಳಿಬಾರೆ ಗ್ರಾಮ</td><td>ವಂತಿಕೆ, 2 ಎಕರೆ ಜಮೀನು ನೀಡಿದ್ದಾರೆ</td></tr>
<tr><td>ಅರಸೀಕೆರೆ</td><td>12</td><td>ಗಂಡಸಿ ಸಂತೆ ಮೈದಾನ</td><td>ತಾತ್ಕಾಲಿಕ ಕಟ್ಟಡ ನೀಡಿದ್ದಾರೆ</td></tr>
<tr><td>ಆಲೂರು</td><td>13</td><td>ಕಲ್ಲಾರೆ ಕೆ.ಹೊಸಕೋಟೆ</td><td></td></tr>
</table>
ಆದರೆ, ಸರ್ಕಾರದ ಆದೇಶ ಸಂಖ್ಯೆ: ಆಕುಕ 626 ಸಿಜಿಎಂ 2008 ಬೆಂಗಳೂರು ದಿನಾಂಕ: 21-08-2010ರಲ್ಲಿ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ, ಹೊಳೆನರಸೀಪುರ ತಾಲ್ಲೂಕಿನ ನಗರನಹಳ್ಳಿ ಗ್ರಾಮವನ್ನು ಹೊರತುಪಡಿಸಿ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರದ್ದುಪಡಿಸಲಾಗಿದೆ. ಇದರಿಂದಾಗಿ ಆ ಭಾಗದ ಗ್ರಾಮೀಣ ಪ್ರದೇಶದ ಕಡುಬಡವರಿಗೆ ತೊಂದರೆಯಾಗಲಿದ್ದು, ರದ್ದುಪಡಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತೆ ಮಂಜೂರಾತಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಲು ಸಭೆಯ ಗಮನಕ್ಕೆ ತಂದರು.</td><td></td></tr>
<tr><td>2</td><td>ದಿಡಗ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್ ಸೇವೆಯನ್ನು ಒದಗಿಸುವ ಬಗ್ಗೆ.</td><td>ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಮಾತನಾಡುತ್ತಾ, ಚನ್ನರಾಯಪಟ್ಟಣ ತಾಲ್ಲೂಕು ದಿಡಗ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಜನರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದು, ಆಂಬುಲೆನ್ಸ್ ಸೌಲಭ್ಯವನ್ನು ಒದಗಿಸಿದಲ್ಲಿ ತುರ್ತು ಸಮಯದಲ್ಲಿ ಸಾರ್ವಜನಿಕರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ, ಆಂಬುಲೆನ್ಸ್ ಸೌಲಭ್ಯವನ್ನು ಒದಗಿಸಬೇಕೆಂದು ಕೋರಿದರು.</td><td>ಸಭೆಯಲ್ಲಿ ಚರ್ಚಿಸಿದಂತೆ, ಚನ್ನರಾಯಪಟ್ಟಣ ತಾಲ್ಲೂಕು ದಿಡಗ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತುರ್ತು ಸಮಯದಲ್ಲಿ ರೋಗಿಗಳನ್ನು ಕರೆದುಕೊಂಡು ಬರಲು ಅನುಕೂಲವಾಗುವಂತೆ ಆಂಬುಲೆನ್ಸ್ ಸೇವೆಯನ್ನು ಒದಗಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.</td></tr>
<tr><td>3</td><td>ಆಲೂಗೆಡ್ಡೆ ಬೆಳೆಗೆ ಪರಿಹಾರವನ್ನು ನೀಡುವ ಬಗ್ಗೆ</td><td>ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣರವರು ಮಾತನಾಡುತ್ತಾ, ಕಳೆದ ಮೂರು ವರ್ಷದಿಂದ ಹಾಸನ ಜಿಲ್ಲೆಯಲ್ಲಿ ಅಂಗಮಾರಿ ರೋಗದಿಂದ ಆಲೂಗೆಡ್ಡೆ ಬೆಳೆಯು ಸರಿಯಾಗಿ ಬಾರದೆ ರೂ.350.00ಕೋಟಿಗಳಿಂದ ರೂ.400.00ಕೋಟಿಗಳಷ್ಟು ನಷ್ಟವಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಆದಕಾರಣ ರೈತರಿಗೆ ಶೇ.50ರಷ್ಟು ಪರಿಹಾರ ಧನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು.</td><td>ಸಭೆಯಲ್ಲಿ ಚರ್ಚಿಸಿದ ನಂತರ, ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಯಿಂದ ರೈತರಿಗೆ ನಷ್ಟವುಂಟಾಗಿದ್ದು, ರೈತರಿಗೆ ಶೇ.50ರಷ್ಟು ಪರಿಹಾರ ಧನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.</td></tr>
<tr><td>4</td><td>ಸಕಲೇಶಪುರ ಟೌನ್ ಗೆ ಮಂಜೂರಾಗಿರುವ ಮುಖ್ಯೋಪಾಧ್ಯಾಯರ</td><td>ಮಾನ್ಯ ಸದಸ್ಯರಾ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಸಕಲೇಶಪುರ ಟೌನ್ ನಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಗೆ 2010-11ನೇ ಶಾಲಿನಲ್ಲಿ ಮುಖ್ಯೋಪಾಧ್ಯಾಯರ ಕೊಠಡಿಯು</td><td>ಸಭೆಯಲ್ಲಿ ಚರ್ಚಿಸಿದಂತೆ, ಸಕಲೇಶಪುರ ಟೌನ್ ನಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಗೆ ಮಂಜೂರಾಗಿರುವ</td></tr>
</table>

h5

<table>
<tr>
<td></td>
<td>ಕೊಠಡಿಯನ್ನು ಬೇರೆ ಸ್ಥಳಕ್ಕೆ ಬದಲಾವಣೆ ಮಾಡುವ ಬಗ್ಗೆ.</td>
<td>ಮಂಜೂರಾಗಿರುತ್ತದೆ. ಆದರೆ, ಸದರಿ ಶಾಲೆಯಲ್ಲಿ ಸ್ಥಳಾವಕಾಶವಿರುವುದಿಲ್ಲ. ಆದ್ದರಿಂದ, ಸಕಲೇಶಪುರ ಟೌನ್ ನಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಗೆ ಮಂಜೂರಾಗಿರುವ ಮುಖ್ಯೋಪಾಧ್ಯಾಯರ ಕೊಠಡಿಯನ್ನು ಅಗತ್ಯವಿರುವ ಬೇರೆ ಶಾಲೆಗೆ ಬದಲಾವಣೆ ಮಾಡಬೇಕೆಂದು ಕೋರಿದರು.</td>
<td>ಮುಖ್ಯೋಪಾಧ್ಯಾಯರ ಕೊಠಡಿಯನ್ನು ಸ್ಥಳಾವಕಾಶವಿಲ್ಲದಿರುವುದರಿಂದ, ಅಗತ್ಯವಿರುವ ಬೇರೆ ಶಾಲೆಗೆ ಬದಲಾವಣೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.</td>
</tr>
<tr>
<td>5</td>
<td>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ ಇವರಿಗೆ ಹೊಸ ಕಾರು ಹಾಗೂ ಹಾಸನ ಜಿಲ್ಲಾ ಪಂಚಾಯಿತಿ ಕಛೇರಿ ಕಟ್ಟಡ ದುರಸ್ಥಿ ಹಾಗೂ ಸಭಾಂಗಣದ ನವೀಕರಣ ಮತ್ತು ಕಛೇರಿಉಪಯೋಗಕ್ಕಾಗಿ ಕಂಪ್ಯೂಟರ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.</td>
<td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(6)ಇತರೆ-/2010-11 ದಿನಾಂಕ: 11-11-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಇವರು ಉಪಯೋಗಿಸುತ್ತಿರುವ ಕಾರು ಹಳೆಯದಾಗಿದ್ದು, ಆಗಾಗ್ಗೆ ದುರಸ್ಥಿಗೆ ಬರುತ್ತಿರುವುದರಿಂದ, ಹೊಸ ಕಾರು ಖರೀದಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ, ಅಧಿಕಾರಿಗಳ ಉಪಯೋಗಕ್ಕಾಗಿ ಹೊಸ ಕಾರನ್ನು ಖರೀದಿಸಲು ಹಾಗೂ ಹಾಸನ ಜಿಲ್ಲಾ ಪಂಚಾಯಿತಿ, ಕಛೇರಿಯ ಕಟ್ಟಡ ಹಾಗೂ ಮುಖ ಮಂಟಪದ ನೆಲಹಾಸು ದುರಸ್ಥಿ ಮತ್ತು ಸಭಾಂಗಣ ನವೀಕರಣಗೊಳಿಸುವುದು ಅತೀ ಅವಶ್ಯಕವಾಗಿರುತ್ತದೆ. ಕಛೇರಿಯಲ್ಲಿ ಉಪಯೋಗಿಸುತ್ತಿರುವ ಕಂಪ್ಯೂಟರ್ ಗಳು ತುಂಬಾ ಹಳೆಯದಾಗಿದ್ದು, ದೈನಂದಿನ ಕಛೇರಿ ಕೆಲಸಗಳಿಗೆ ತೊಂದರೆಯಾಗಿರುತ್ತದೆ. ಅಲ್ಲದೆ, ಪ್ರಾದೇಶಿಕ ಆಯುಕ್ತರು, ಮೈಸೂರು ಇವರು LMS/ FMS ತಂತ್ರಾಂಶವನ್ನು ಕೂಡಲೇ ಜಾರಿಗೆ ತರುವಂತೆ ಸೂಚಿಸಿರುವ ಮೇರೆಗೆ, ಈ ಕೆಳಕಂಡ ಹೊಸ ಕಂಪ್ಯೂಟರ್ ಗಳು , ಪ್ರಿಂಟರ್ಸ್ ಗಳು ಹಾಗೂ ಅಗತ್ಯ ಸಾಮಗ್ರಿಗಳನ್ನು ಖರೀದಿಸುವುದು ಅತ್ಯವಶ್ಯಕವಾಗಿರುತ್ತದೆ.<br><br><u>ವಿವರಗಳು:</u> .
<table>
<tr><th>ಕ್ರಸಂ</th><th>ಸಾಮಗ್ರಿ ವಿವರ</th><th>ಪ್ರಮಾಣ</th></tr>
<tr><td>1</td><td>Computers (Desktop)</td><td>6</td></tr>
<tr><td>2</td><td>ಅಧಿಕಾರಿಗಳಿಗೆ Laptap</td><td>8</td></tr>
<tr><td>3</td><td>Colour printers</td><td>3</td></tr>
<tr><td>4</td><td>Black and white printers</td><td>3</td></tr>
<tr><td>5</td><td>U.P.S with 5 hrs backup</td><td>6</td></tr>
<tr><td>6</td><td>L.C.D projector with screen</td><td>1</td></tr>
<tr><td>7</td><td>Panasonic Digital Camera</td><td>6</td></tr>
<tr><td>8</td><td>Panasonic Handicam with 3 CCD</td><td>1</td></tr>
<tr><td>9</td><td>Sprial binding Machine</td><td>2</td></tr>
<tr><td>10</td><td>Punching and Cutting Machine</td><td>2</td></tr>
<tr><td>11</td><td>2011-12ನೇ ಸಾಲಿನ ಡೈರಿಗಳನ್ನು ಮುದ್ರಿಸುವುದು</td><td></td></tr>
</table>
</td>
<td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br><br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಹೊಸ ಕಾರನ್ನು ಖರೀದಿಸಲು, ಜಿಲ್ಲಾ ಪಂಚಾಯಿತಿ ಕಛೇರಿ ಕಟ್ಟಡ ಹಾಗೂ ಮುಖ ಮಂಟಪದ ನೆಲಹಾಸು ದುರಸ್ಥಿ, ಸಭಾಂಗಣ ನವೀಕರಣ ಮತ್ತು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಗತ್ಯ ಕಂಪ್ಯೂಟರ್, ಪ್ರಿಂಟರ್ ಮತ್ತು ಇತರೇ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.</td>
</tr>
</table>

hh

| | | | |
|---|---|---|---|
| | | ಆದ್ದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ ಇವರ ಉಪಯೋಗಕ್ಕಾಗಿ ಹೊಸ ಕಾರು ಖರೀದಿಸಲು, ಜಿಲ್ಲಾ ಪಂಚಾಯಿತಿ ಕಟ್ಟಡ ದುರಸ್ಥಿ ಹಾಗೂ ಜಿಲ್ಲಾ ಪಂಚಾಯಿತಿ ಸಭಾಂಗಣವನ್ನು ನವೀಕರಿಸಲು ಮತ್ತು ಮೇಲ್ಕಂಡ ಕಂಪ್ಯೂಟರ್ಸ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ವಿಷಯವನ್ನು ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯಕ್ಕೆ ಮಂಡಿಸಿದೆ. | |
| 6 | ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಯಲ್ಲಿ ನಡೆಯುವ ಸಮ್ಮೇಳನಕ್ಕೆ ಅನು ದಾನ ಕೋರಿ | ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಹಾಸನ ಜಿಲ್ಲಾ ಘಟಕ ಇವರು ಮನವಿಯನ್ನು ಸಲ್ಲಿಸಿ ನವೆಂಬರ್ ಮಾಹೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಗ್ರಾಮದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿದ್ದು, ಸಮ್ಮೇಳನಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಅನುದಾನ ನೀಡುವಂತೆ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಹಾಸನ ಜಿಲ್ಲಾ ಘಟಕ ಇವರು ಕೋರಿರುವಂತೆ, ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಗ್ರಾಮದಲ್ಲಿ ನವೆಂಬರ್ ಮಾಹೆಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ವಂತಿಕೆಯನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | 2010-11ನೇ ಸಾಲಿನ ರಾಜ್ಯ ಮಟ್ಟದ ಟೇಬಲ್ ಟೆನ್ನೀಸ್ ಪಂದ್ಯಾವಳಿಯನ್ನು ಹಾಸನ ಜಿಲ್ಲೆಯಲ್ಲಿ ಆಯೋಜಿಸುತ್ತಿದ್ದು, ಅನುದಾನವನ್ನು ನೀಡುವಂತೆ ಕೋರಿ | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ ಇವರು ಮನವಿಯನ್ನು ಸಲ್ಲಿಸಿ 2010-11ನೇ ಸಾಲಿನ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳ ರಾಜ್ಯ ಮಟ್ಟದ ಟೇಬಲ್ ಟೆನ್ನೀಸ್, ಪಂದ್ಯಾವಳಿಯನ್ನು ಹಾಸನ ಜಿಲ್ಲೆಯಲ್ಲಿ ದಿನಾಂಕ: 19-11-2010 ಮತ್ತು 20-11-2010ರಂದು ಜಿಲ್ಲಾ ಕ್ರೀಡಾಂಗಣದ ಮುಂಭಾಗದಲ್ಲಿರುವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿಯಿಂದ ಆರ್ಥಿಕ ಮತ್ತು ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ ಇವರು ಕೋರಿರುವಂತೆ ದಿನಾಂಕ: 19-11-2010 ಮತ್ತು 20-11-2010ರಂದು ಹಾಸನ ಜಿಲ್ಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳ ರಾಜ್ಯ ಮಟ್ಟದ ಟೇಬಲ್ ಟೆನ್ನೀಸ್ ಪಂದ್ಯಾವಳಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| 8 | ಶ್ರೀ ಮಾರುತಿ ಯುವಕ ಸಂಘ, ರುದ್ರಪಟ್ಟಣ ಇವರು ಪ್ರತೀ ವರ್ಷವೂ ರಾಸುಗಳ ಓಟ ನಡೆಸುತ್ತಿದ್ದು, ದಿನಾಂಕ: 11-11-2010ರ ಗುರುವಾರ ಮ: 1-00 ಗಂಟೆ ಸಮಯದಲ್ಲಿ ರಾಸುಗಳ ಓಟವನ್ನು ನಡೆಸಿದಾಗ ಆಕಸ್ಮಿಕವಾಗಿ ಒಂದು ರಾಸು ಮೃತ ಪಟ್ಟಿರುವುದಕ್ಕೆ ಪರಿಹಾರಧನವನ್ನು ನೀಡುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್ ರವರು ಮನವಿಯನ್ನು ನೀಡಿ ರಾಮೇಗೌಡ ಬಿನ್ ನಿಂಗೇಗೌಡ, ರುದ್ರಪಟ್ಟಣ ಗ್ರಾಮ, ಅರಕಲಗೂಡು ತಾಲ್ಲೂಕು ಇವರು ಬಡ ಕುಟುಂಬಸ್ಥರಾಗಿದ್ದು, ಶ್ರೀ ಮಾರುತಿ ಯುವಕ ಸಂಘ, ರುದ್ರಪಟ್ಟಣ ಇವರು ಪ್ರತೀ ವರ್ಷವೂ ರಾಸುಗಳ ಓಟ ನಡೆಸುತ್ತಿದ್ದು, ದಿನಾಂಕ: 11-11-2010ರ ಗುರುವಾರ ಮ: 1-00 ಗಂಟೆ ಸಮಯದಲ್ಲಿ ರಾಸುಗಳ ಓಟವನ್ನು ನಡೆಸಿದಾಗ, ಆಕಸ್ಮಿಕವಾಗಿ ಒಂದು ರಾಸು ಮೃತ ಪಟ್ಟಿರುತ್ತದೆ. ಎರಡು ರಾಸುಗಳ ಬೆಲೆ ರೂ.60000/-ಗಳಾಗಿದ್ದು, ಮೃತಪಟ್ಟ ಎತ್ತಿಗೆ ಸಂಬಂಧಪಟ್ಟ ಪಶುವೈಧ್ಯಾಧಿಕಾರಿಯಿಂದ ಮರಣೋತ್ತರ ಪರೀಕ್ಷೆಯನ್ನು ನಡೆಸಿ ಎಲ್ಲಾ ಫೋಟೋಗಳನ್ನು ತೆಗೆಸಿದ್ದು, ವರದಿಯು ಪಶುವೈದ್ಯಾಧಿಕಾರಿ ಬಳಿ ಇದ್ದು, ಮೃತ ಪಟ್ಟ ಎತ್ತಿನ ಮಾಲೀಕನಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ಅಥವಾ ಪಶುವೈದ್ಯಕೀಯ ಇಲಾಖೆ ವತಿಯಿಂದ ಪರಿಹಾರ ಧನವನ್ನು ಕೊಡಿಸಿ ಕೊಡಬೇಕೆಂದು ಕೋರಿರುತ್ತಾರೆ. | |
| 9 | ದಿನಾಂಕ: 26-11-2010ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಸನ ಕಲಾವಿದರ ಸಹಾಯಾರ್ಥ ರಸಮಂಜರಿ ಕಾರ್ಯಕ್ರಮ ನಡೆಸಲು ಧನ ಸಹಾಯ ಕೋರಿರುವ ಬಗ್ಗೆ. | ಅಧ್ಯಕ್ಷರು, ಶ್ರೀ ಭುವನೇಶ್ವರಿ ಕಲಾ ಸಂಘ, ಉದ್ದೂರು, ಹಾಸನ ಇವರು ಮನವಿ ಸಲ್ಲಿಸಿ ದಿನಾಂಕ: 26-11-2010ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಲ್ಲಿ ರಸಮಂಜರಿ ಕಾರ್ಯಕ್ರಮ ನಡೆಸಲಿದ್ದು, ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ನೀಡ ಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಶ್ರೀ ಭುವನೇಶ್ವರಿ ಕಲಾ ಸಂಘ, ಉದ್ದೂರು, ಹಾಸನ ಇವರು ಕೋರಿರುವಂತೆ ದಿನಾಂಕ: 26-11-2010ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ರಸಮಂಜರಿ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 10 | ಮಲೇಶಿಯಾದಲ್ಲಿ ನಡೆಯುವ ಕ್ರೀಡಾ ಕೂಟದಲ್ಲಿ ಭಾಗವಹಿಸಲು ಧನ ಸಹಾಯ ನೀಡುವ ಬಗ್ಗೆ. | ಶ್ರೀ ಬಿ.ರಂಗನಾಥ್ ಇವರು ಮಲೇಶಿಯಾದಲ್ಲಿ ನಡೆಯುವ 16ನೇ ಹಿರಿಯರ ಅಥ್ಲೆಟಿಕ್ಸ್ ನಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದು, ಕ್ರೀಡಾಕೂಟದಲ್ಲಿ ಭಾಗವಹಿಸಲು ಅನುಕೂಲ ವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶ್ರೀ ಬಿ.ರಂಗನಾಥ್, ಬಿ.ಚೌಡೇನಹಳ್ಳಿ, ಚನ್ನರಾಯ ಪಟ್ಟಣ ಇವರು ಕೋರಿರುವಂತೆ ಮಲೇಶಿಯಾದ ಕೌಲಲಾಂಪುರದಲ್ಲಿ ನಡೆಯುವ 16ನೇ ಹಿರಿಯರ ಅಥ್ಲೆಟಿಕ್ಸ್ ನಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯ ವನ್ನು ನಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| | ಕಾರ್ಯಕ್ರಮಕ್ಕೆ ಆರ್ಥಿಕ ಧನ ಸಹಾಯ ಕೋರಿ | ಮನವಿಯನ್ನು ಸಲ್ಲಿಸಿ, ದಿನಾಂಕ: 21-11-2010ರಂದು ನ್ಯಾಷನಲ್ ಟ್ರಸ್ಟ್ ನ ರಾಷ್ಟ್ರೀಯ ಜನ-ಜಾಗೃತಿ ಕಾರ್ಯಕ್ರಮ ಬಡ್ತೆಕದಂ-II ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಸಹಕಾರ ಮತ್ತು ಆರ್ಥಿಕ ಸಹಾಯ ವನ್ನು ಕೋರಿರುತ್ತಾರೆ. | ಡೆವಲಪ್ ಮೆಂಟರ್ ಆಫೀಸರ್, ದಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್, ಹಾಸನ ಇವರು ಕೋರಿರುವಂತೆ, ದಿನಾಂಕ: 21-11-2010ರಂದು ನಡೆಯುವ ನ್ಯಾಷನಲ್ ಟ್ರಸ್ಟ್ ನ ರಾಷ್ಟ್ರೀಯ ಜನ-ಜಾಗೃತಿ ಕಾರ್ಯಕ್ರಮ ಬಡ್ತೆಕದಂ-II ಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನ ಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 12 | ಕನ್ನಡ ಜಾಗೃತಿ ಯಾಂತ್ರೆಗೆ ಸಹಕಾರ ಕೋರಿ. | ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಹಾಸನ ಜಿಲ್ಲೆ ಇವರು ಮನವಿಯನ್ನು ಸಲ್ಲಿಸಿ ಹಾಸನ ಜಿಲ್ಲೆಯಲ್ಲಿ ದಿನಾಂಕ: 22-11-2010 ಮತ್ತು 30-11-2010ರವರೆಗೆ ಜಿಲ್ಲೆಯಾದ್ಯಂತ ಶಾಲಾ ಕಾಲೇಜು ಹಾಗೂ ಸಾರ್ವಜನಿಕರಿಗೆ ಕನ್ನಡದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕನ್ನಡ ಜಾಗೃತಿ ಯಾತ್ರೆ ಹಮ್ಮಿಕೊಂಡಿದ್ದು, ಜಿಲ್ಲೆಯ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಜಿಲ್ಲಾ ಪಂಚಾಯಿತಿಯಿಂದ ಆರ್ಥಿಕ ಸಹಾಯ ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಹಾಸನ ಜಿಲ್ಲೆ ಇವರು ಕೋರಿರುವಂತೆ, ಹಾಸನ ಜಿಲ್ಲೆಯಲ್ಲಿ ದಿನಾಂಕ: 22-11-2010 ಮತ್ತು 30-11-2010ರವರೆಗೆ ನಡೆಸಲು ಉದ್ದೇಶಿಸಿರುವ ಕನ್ನಡ ಜಾಗೃತಿ ಯಾತ್ರೆಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

Mahadevamma
(ಮಹದೇವಮ್ಮ),
ಅಧ್ಯಕ್ಷರು,
ಜಿಲ್ಲಾ ಪಂಚಾಯತ್, ಹಾಸನ.